ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ. ಗಣಕಶಾಖೆ/ಎಸ್.ಎಸ್.ಎಲ್.ಸಿ/01/2018-19 ದಿನಾಂಕ 28/11/2018

## -ಸುತ್ತೋಲೆ -

ವಿಷಯ : 2018-19 ನೇ ಸಾಲಿಗೆ ಮಾನ್ಯತೆ ನವೀಕರಣವಾಗದೇ ಇರುವ ಪ್ರೌಢಶಾಲೆಗಳ ಪಟ್ಟಿಯನ್ನು ಮಂಡಳಿಗೆ ಸಲ್ಲಿಸುವ ಬಗ್ಗೆ

ಉಲ್ಲೇಖ : 1) ದಿನಾಂಕ 20/08/2018 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ

2) ಈ ಕಛೇರಿ ಪತ್ರ ಸಂ. ಗಣಕಶಾಖೆ/ಎಸ್.ಎಸ್.ಎಲ್.ಸಿ/01/2018-19 ದಿನಾಂಕ 27/09/2018

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಯಲ್ಲಿನ ಎಪ್ರಿಲ್-2019ರ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ವಿವರಗಳನ್ನು ಎಸ್.ಎ.ಟಿ.ಎಸ್ ಜಾಲತಾಣದ ಮೂಲಕ ಸಲ್ಲಿಸುವ ವಿಧಾನದ ಬಗ್ಗೆ ದಿನಾಂಕ 20/08/2018 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗಿದೆ.

ಅದರಂತೆ ಇಲಾಖೆಯಿಂದ ಮಾನ್ಯತೆ ಪಡೆದಿರುವ ಮತ್ತು ನವೀಕರಣಗೊಂಡಿರುವ ಶಾಲೆಗಳ ಮುಖ್ಯಶಿಕ್ಷಕರು ಮಾತ್ರ ಜಾಲತಾಣದಲ್ಲಿ ಮಾಹಿತಿಗಳನ್ನು ಅಪ್ ಲೋಡ್ ಮಾಡಲು ಅವಕಾಶ ನೀಡಲಾಗಿತ್ತು. ಆದರೆ ಮಂಡಳಿಯ ಸಹಾಯವಾಣಿಯಲ್ಲಿ ಸ್ವೀಕೃತ ಕರೆಗಳಿಗನುಸಾರ ಅನೇಕ ಶಾಲೆಗಳ ಮುಖ್ಯಸ್ಥರು 2018-19 ರ ಮಾನ್ಯತೆ ನವಿಕರಣವಾಗದೇ ಮಾಹಿತಿಗಳನ್ನು ಅಪ್ ಲೋಡ್ ಮಾಡಿ ನಂತರ ಎಸ್.ಎ.ಟಿ.ಎಸ್ ಜಾಲತಾಣದಲ್ಲಿ ಫೀ ಚಲನ್ ಗಳನ್ನು ಪಡೆದಿರುವ ಉದಾಹರಣೆಗಳಿವೆ. ಮಂಡಳಿಯ ನಿಯಮಾನುಸಾರ ನೋಂದಣಿ/ಮಾನ್ಯತೆ ನವೀಕರಣವಾಗಿರುವ ಶಾಲೆಗಳು ಮಾತ್ರ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವಿದೆ. ಆದ್ದರಿಂದ, ಮಾನ್ಯತೆ ನವೀಕರಣವಾಗದ ಶಾಲೆಗಳ ಪಟ್ಟಿಯನ್ನು ದಿನಾಂಕ 07/12/2018 ರ ಒಳಗೆ ಮಂಡಳಿಗೆ ತಲುಪುವಂತೆ ನೀಡಲು ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಈ ಮೂಲಕ ಸೂಚಿಸಲಾಗಿದೆ. ಉಪನಿರ್ದೇಶಕರು ಸೂಚಿಸುವ ಮಾನ್ಯತೆ ನವೀಕರಣವಾಗದ ಶಾಲೆಗಳ ಪ್ರವೇಶಪತ್ರಗಳನ್ನು ತಡೆಹಿಡಿಯಲಾಗುವುದು. ಸೂಚಿಸಿದ ದಿನಾಂಕದ ಒಳಗೆ ಅನಧಿಕೃತ ಶಾಲೆಗಳ ಮತ್ತು ಮಾನ್ಯತೆ ನವೀಕರಣಗೊಳ್ಳದ ಶಾಲೆಗಳ ಪಟ್ಟಿಯನ್ನು ನೀಡದೇ ಆ ಶಾಲೆಗಳು ಪ್ರವೇಶ ಪತ್ರಗಳನ್ನು ಪಡೆದರೆ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ಉಪನಿರ್ದೇಶಕರು ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

(ಸುಮಂಗಲ. 28/11/18

ನಿರ್ದೇಶಕರು, ಪರೀಕ್ಷೆಗಳು

ಗೆ,

ರಾಜ್ಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು,

ನಿರ್ದೇಶಕರು (ಪ್ರೌಢ ಶಿಕ್ಷಣ) ಇವರಿಗೆ ಮಾಹಿತಿಗಾಗಿ ಹಾಗು ಮುಂದಿನ ಕ್ರಮಕ್ಕಾಗಿ